ಗರ್ಭನಿರೋಧಕಗಳು ಹೆಣ್ಣಿನ ಬದುಕಿನ ವರವಾಗಿ ಕಾಣಿಸುವುದು. ತಾಯ್ತನವು ಹೆಣ್ಣನ್ನು ನಿರ್ಬಂಧಿಸುವುದಷ್ಟೇ ಅಲ್ಲ, ಅವಳ ವ್ಯಕ್ತಿತ್ವವನ್ನೇ ಕಟ್ಟಿ ಹಾಕುವ, ಅನೇಕ ಬಾರಿ ಅದಕ್ಕಾಗಿ ತನ್ನ ಬದುಕು, ವ್ಯಕ್ತಿತ್ವವನ್ನೇ ಅವಳು ಮುಗಿಸಿಕೊಂಡುಬಿಡಬೇಕಾದ ದುರಂತವೂ ಆಗುವ ವಿಪರ್ಯಾಸದ ವಾಸ್ತವವನ್ನು ಹೇಗೆ ಬದಲಿಸುವುದು? ಹೆಣ್ಣು ತನ್ನ ಆಯ್ಕೆಯಲ್ಲಿ ತಾಯ್ತನವನ್ನು ಪಡೆದಾಗ, ತನ್ನ ದೇಹದ ಮೇಲೆ ಸಂಪೂರ್ಣ ಹಕ್ಕನ್ನು ಪಡೆದಾಗ ಅವಳಿಗೆ ತನ್ನ ಬದುಕು, ವೃತ್ತಿ, ವ್ಯಕ್ತಿತ್ವ, ಅಸ್ಮಿತೆ – ಒಟ್ಟಿನಲ್ಲಿ 'ತನ್ನದು' ಎಂದು ಕರೆಯಲಾಗಬಹುದಾದ ಸ್ವಂತದ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ಹೆಣ್ಣಿನ ಬದುಕೇನಿದ್ದರೂ ಕೊಡುವ ಬಾಧ್ಯಸ್ಥಿಕೆಯದ್ದು ಮಾತ್ರ ಎನ್ನುವ ಸಮೀಕರಣವು ಬದಲಾಗಿ 'ಪಡೆಯುವ' ಸಂತೋಷವನ್ನೂ ಅನುಭವಿಸುವ ಕಾಲಮಾನವನ್ನು ಈ ಕೃತಿ ಅನತಿ ಕಾಲದಲ್ಲಿಯೇ ನಿಜವಾಗಬಹುದಾದ ಕಾಣ್ಕೆಯನ್ನು ಪ್ರಸ್ತುತಪಡಿಸುತ್ತಾ ಹೋಗುತ್ತದೆ. ಮದುವೆ, ಜೊತೆಗೂಡಿ ಬದುಕುವ ಹೊಸ ವಿಧಾನಗಳನ್ನು, ಪರಸ್ಪರ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ 'ಮೌಲ್ಯ'ವನ್ನು ಬೆಲ್ ಹುಕ್ಸ್ ಸಿದ್ಧಾಂತವಾಗಿ ಹೇಳುವುದಿಲ್ಲ. ಅದನ್ನು 'ಪ್ರೀತಿಸುವ ಹೊಸ ಬಗೆ' ಎಂದೇ ಹೇಳುತ್ತಾರೆ. ಇದನ್ನು ಹೆಣ್ಣು ಮಾತ್ರ ಹೇಳಲು ಸಾಧ್ಯ. ಬದುಕಿನ ಹೊಸ, ಅಂತಃಕರಣದ ಸಂವಿಧಾನವನ್ನು ಈ ಕೃತಿ ರಚಿಸುತ್ತದೆ.

ಒಟ್ಟೂ ಸ್ತ್ರೀವಾದಕ್ಕೆ ಕಪ್ಪು ಸ್ತ್ರೀವಾದದ ಕೊಡುಗೆಯನ್ನು ಹೆಣೆದಿರುವ ಕ್ರಮ ಈ ಕೃತಿಯ ಮಹತ್ವವನ್ನು ಹೆಚ್ಚಿಸುತ್ತದೆ. ಬಿಳಿಯ ಸ್ತ್ರೀವಾದದ ವರ್ಣಮೂಲ ತಾತ್ಸಾರವನ್ನು ಅಂತಃಕರಣ ಮತ್ತು ಆತ್ಮವಿಶ್ವಾಸದ ಬಲದಿಂದ ಗೆದ್ದ ಈ ಮಹಿಳೆಯರು ಈ ಕಾರಣಕ್ಕಾಗಿ ಸ್ತ್ರೀಸಂಕುಲದ ಜಾಗತಿಕ ಐಕ್ಯತೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಪಾರಸ್ಪರಿಕ ಭಿನ್ನತೆಗಳನ್ನು, ಹೀಯಾಳಿಕೆಯನ್ನು ಮೀರುವುದು ಸುಲಭದ ಕೆಲಸವಲ್ಲ.

ಸ್ತ್ರೀವಾದಿಗಳೆಂದರೆ ಯಾರು? ಇವತ್ತಿಗೂ ಅನೇಕ ಮುಖ್ಯ ಲೇಖಕಿಯರು ಕೂಡ ತಮ್ಮನ್ನು ಸ್ತ್ರೀವಾದದ ಛತ್ರಿಯಡಿಯಲ್ಲಿ ಗುರುತಿಸಿಕೊಳ್ಳಲು ಒಪ್ಪುವುದಿಲ್ಲ. ತಾವು ಮಾನವತಾವಾದಿಗಳೆಂದು ಸರಿಯಾಗಿ ಮತ್ತು ಜಾಣತನದಲ್ಲಿ ಹೇಳುತ್ತಾರೆ. ತಮ್ಮನ್ನು ವರ್ಗೀಕರಿಸುವ, ಸೀಮಿತಗೊಳಿಸಿಬಿಡಬಹುದಾದ ಅಪಾಯವನ್ನು ನಿರೀಕ್ಷಿಸಿ ಹೀಗೆ ಜಾಗ್ರತೆ ವಹಿಸುವುದು ಅರ್ಥವಾಗುತ್ತದೆ. ಆದರೆ, ಈ ಮೆಟ್ಟಿಲು ಹತ್ತದೆಯೇ ನಾವು ಗುರಿಯನ್ನು ತಲುಪುವುದು ಸಾಧ್ಯವೇ ಇಲ್ಲ. ತಲೆಯೆತ್ತಿ 'ನಾನು ಸ್ತ್ರೀವಾದಿ' ಎಂದು ಘೋಷಿಸುವುದು, ಗಂಡಸರೂ ಕೂಡ ನಾನು ಸ್ತ್ರೀವಾದಿ ಎಂದು ಕೈಎತ್ತಲು ಕೊಡುವ ಕರೆಯಾಗುತ್ತದೆ. ಆದ್ದರಿಂದಲೇ ಈ ಪಥ್ಯದಲ್ಲಿ ಲೇಖಕಿ, ನನ್ನನ್ನು ಯಾರಾದರೂ 'ಏನು ಮಾಡುತ್ತಿದ್ದಿ' ಎಂದು ಕೇಳಿದರೆ, ಸಂತೋಷದಿಂದ ಸ್ತ್ರೀವಾದಿ ಎನ್ನುತ್ತೇನೆ ಎಂದು ಹೇಳುತ್ತಾರೆ. ಇದರಿಂದಾಗುವ ಇನ್ನೊಂದು ಅನುಕೂಲವೂ ಇದೆ. ಅನೇಕರು, ಅದನ್ನು ಪ್ರಶ್ನಿಸಿದಾಗ, ತಕರಾರು ಎತ್ತಿದಾಗ ಅದರ ಬಗ್ಗೆ ಸರಳವಾದ ಆದರೆ ಮನದಟ್ಟು ಮಾಡಿಸಬಲ್ಲ ಚರ್ಚೆಯನ್ನೂ ಮಾಡಬಹುದು. ಸ್ತ್ರೀವಾದದ ಬಗ್ಗೆ ಏನೆಂದರೆ ಏನೂ ಗೊತ್ತಿಲ್ಲದೇ ಇರುವವರು ಅದನ್ನು ವಿರೋಧಿಸಿ, ದ್ವೇಷಿಸುವ ವಿಪರ್ಯಾಸವು ತಮ್ಮ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು ಎನ್ನುವ ಮಾತಂತೂ ಅನೇಕರಿಗೆ ಸ್ಫೂರ್ತಿದಾಯಕ.

ಶ್ರೀಮತಿಯವರು ಕನ್ನಡ ಸ್ತ್ರೀವಾದವನ್ನು ಅನುವಾದಗಳ ಮೂಲಕ ಬಲಪಡಿಸಿದವರು. 'ಸೋದರಿತ್ವ ಪ್ರಬಲ'ವಾಗಿದೆ ಎನ್ನುವುದನ್ನು ಜಾಗತಿಕ ಮಹತ್ವದ ಸ್ತ್ರೀವಾದಿ ಕೃತಿಗಳನ್ನು ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ತಂದವರು. ನಿಡುಗಾಲದಿಂದ ಸ್ತ್ರೀವಾದಿ ಚಿಂತನೆಯನ್ನು ಕನ್ನಡದಲ್ಲಿ ಕಟ್ಟಿದವರು. ಸಮಕಾಲೀನ ಸಂದರ್ಭದಲ್ಲಿ ಸ್ತ್ರೀವಾದವು ವಹಿಸಬೇಕಾದ ಮುಂದಾಳತ್ವದ ಮುನ್ನುಡಿಯಂತಿರುವ ಈ ಕೃತಿಯನ್ನು ಕನ್ನಡದ್ದೇ ಎನ್ನುವಂತೆ ಅನುವಾದಿಸುವ ಮೂಲಕ ಶ್ರೀಮತಿಯವರು ಸ್ತ್ರೀವಾದದ 'ಏಕ ಭಾಷೆ'ಯ ಸಮರ್ಥನೆಯನ್ನೂ ಮಾಡಿದ್ದಾರೆ.